ಈ ಕಾಮಗಾರಿಗಳಿಗೆ ಇಲ್ಲಿಯವರೆಗೆ ಸುಮಾರು ರೂ 30 00 ಕೋಟಿಗಳು ವೆಚ್ಚವಾಗಿದೆ ಉಳಿದ 2 413 ಟಿಎಂಸಿ ನೀರು ಬಳಸಿಕೊಳ್ಳುವ ಉದ್ದೇಶ ದೊಂದಿಗೆ 73 ಕಾಮಗಾರಿಗಳ ರೂಪರೇಷೆ ತಯಾರಿಸಲಾಗಿದೆ ಅವುಗಳ ಪೈಕಿ 26 ಕಾಮಗಾರಿಗಳನ್ನು ಸಣ್ಣ ನೀರಾವರಿ ಇಲಾಖೆಗೆ ಪ್ರಸಕ್ತ ಸಾಲಿನಲ್ಲಿ ಆರ್ಥಿಕ ಇಲಾಖೆಯು ಪೂರಕ ಅನುದಾನ ಒದಗಿಸಲು ತಾತ್ವಿಕವಾಗಿ ಒಪ್ಪಿದ್ದು, ಈ ಅನುದಾನದಲ್ಲಿ ಕೈಗೊಳ್ಳಲು ಯೋಜಿಸಲಾಗಿದೆ

ಇ) ಭಾರಿ ಮತ್ತು ಮಧ್ಯಮ ನೀರಾವರಿಯಡಿಯಲ್ಲಿ 15 27 ಟಿಎಂಸಿ ಬಳಸಿಕೊಳ್ಳಬೇಕಾಗಿದ್ದು, ಚುಳಕಿನಾಲಾ ಯೋಜನೆಯಲ್ಲಿ ಈಗಾಗಲೇ 1 17 ಟಿಎಂಸಿ ಬಳಸಿಕೊಳ್ಳಲಾಗಿದ್ದು, ಕಾರಂಜಾ ಯೋಜನೆಯಡಿಯಲ್ಲಿ ಎಲ್ಲಾ ಕಾಮಗಾರಿಗಳನ್ನು ಮಾರ್ಚ್ 2007ಕ್ಕೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದ್ದು, 9 27 ಟಿಎಂಸಿ ಬಳಸಲಾಗುವುದು

ಮಾಂಜ್ರಾ ನದಿಗೆ ಅಡ್ಡಲಾಗಿ ನಿರ್ಮಿಸಲು ಉದ್ದೇಶಿಸಿರುವ 4 ಬ್ಯಾರೇಜುಗಳ ಕಾಮಗಾರಿಗಳು ಪ್ರಗತಿಯಲ್ಲಿದ್ದು, ಈ ಬ್ಯಾರೇಜುಗಳು ಪೂರ್ಣಗೊಂಡ ನಂತರ 4 80 ಟಿಎಂಸಿ ನೀರು ಬಳಸಲಾಗುತ್ತದೆ

ಸಣ್ಣ ನೀರಾವರಿಗೆ ಸಂಬಂಧಪಟ್ಟಂತೆ ಪ್ರಸಕ್ತ ಸಾಲಿನ ಆಯವ್ಯಯದಲ್ಲಿ 7 ಕಾಮಗಾರಿಗಳು ನಬಾರ್ಡ್ ಸಹಾಯ ಧನದಡಿ ಸೇರಿವೆ ಅಲ್ಲದೇ ಮೇಲೆ ತಿಳಿಸಿರುವಂತೆ 26 ಕಾಮಗಾರಿಗಳನ್ನು ಅನುದಾನದ ಲಭ್ಯತೆಯನ್ನು ಅನುಸರಿಸಿ, ಕೈಗೆತ್ತಿಕೊಳ್ಳಲು ಕ್ರಮ ಕೈಗೊಳ್ಳಲಾಗುತ್ತಿದೆ ಗೋದಾವರಿ ಕಣಿವೆಯಲ್ಲಿ ಒಟ್ಟು 7 10 ಟಿಎಂಸಿ ಬಳಸಬಹುದಾಗಿದ್ದು, ಈ ಪೈಕಿ 4 678 ಟಿಎಂಸಿ ಬಳಸಲಾಗಿದ್ದು, ಈ ಕಾಮಗಾರಿಗಳಿಗೆ ಇಲ್ಲಿಯವರೆಗೆ ಸುಮಾರು ರೂ 30 00 ಕೋಟಿಗಳು ವೆಚ್ಚವಾಗಿದೆ ಉಳಿದ 2 413 ಟಿಎಂಸಿ ನೀರು ಬಳಸಿಕೊಳ್ಳುವ ಉದ್ದೇಶದೊಂದಿಗೆ 73 ಕಾಮಗಾರಿಗಳ ರೂಪರೇಷೆ ತಯಾರಿಸಿಕೊಳ್ಳಬೇಕಾಗಿದ್ದು ಕಾಮಗಾರಿಗಳನ್ನು ಅನುದಾನದ ಲಭ್ಯತೆಯ ಅನುಸಾರ ಕೈಗೊಂಡು ಸಣ್ಣ ನೀರಾವರಿ ಪಾಲಿಗೆ ಹಂಚಿಕೆಗೊಂಡಿರುವ ಪೂರ್ಣಪ್ರಮಾಣದ ನೀರನ್ನು ಬಳಸಿಕೊಳ್ಳಲು ಅಗತ್ಯ ಕ್ರಮವನ್ನು ಜರುಗಿಸಲಾಗುವುದು

566 ಶ್ರೀ ಕೃಷ್ಣ ಬೈರೇಗೌಡ ಸಿ ಬಿ ಮಾನ್ಯ ವಸತಿ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೋಲಾರ ಮತ್ತು ಚಿಂತಾಮಣಿ ತಾಲ್ಲೂಕುಗಳಲ್ಲಿ ಈ ಹಿಂದೆ ಪ್ರತಿ ಗ್ರಾಮ ಪಂಚಾಯಿತಿಗೆ 40 ಆಶ್ರಯ ಮನೆಗಳನ್ನು ಮಂಜೂರು ಮಾಡಲಾಗಿದ್ದು

ಈ ಮನೆಗಳಿಗೆ ಇದುವರೆಗೆ ಎಷ್ಟು ಹಣವನ್ನು ಎಷ್ಟು ಕಂತುಗಳಲ್ಲಿ ಬಿಡುಗಡೆ ಮಾಡಲಾಗಿದೆ,

ಆ) ಮಾಡಿದ್ದಲ್ಲಿ ಈ ಮನೆಗಳಿಗೆ ಇನ್ನೂ ಎಷ್ಟು ಹಣವನ್ನು ಬಿಡುಗಡೆ ಮಾಡಲು ಬಾಕಿ ಇದೆ,

ಇ) ಈ ಬಾಕಿ ಹಣವನ್ನು ಯಾವಾಗ ಬಿಡುಗಡೆ ಮಾಡಲಾಗುವುದು?

ಶ್ರೀ ಡಿ ಟಿ ಜಯಕುಮಾರ್ (ವಸತಿ ಸಚಿವರು)

ಅ) ಕೋಲಾರ ಮತ್ತು ಚಿಂತಾಮಣಿ ತಾಲ್ಲೂಕುಗಳಿಗೆ ಪ್ರತಿ ಗ್ರಾಮ ಪಂಚಾಯಿತಿಗೆ 40 ಮನೆಗಳಂತೆ ಮಂಜೂರಾದ ಮನೆಗಳಿಗೆ ಸಂಬಂಧಿಸಿದಂತೆ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್ ಇವರು ನಿಗಮದ ವೆಬ್‌ಸೈಟಿನಲ್ಲಿ ನಮೂದಿಸುವ ಭೌತಿಕ ಮತ್ತು ಅರ್ಥಿಕ ಪ್ರಗತಿಗೆ ಅನುಗುಣವಾಗಿ ಹಣ ಬಿಡುಗಡೆ ಮಾಡಲಾಗುತ್ತಿದೆ ಅದರಂತೆ ಕೋಲಾರ ತಾಲ್ಲೂಕಿಗೆ 7 ಕಂತುಗಳಲ್ಲಿ ರೂ 165 75 ಲಕ್ಷಗಳನ್ನು ಮತ್ತು ಚಿಂತಾಮಣಿ ತಾಲ್ಲೂಕಿಗೆ 3 ಕಂತುಗಳಲ್ಲಿ ರೂ 151 15 ಲಕ್ಷಗಳನ್ನು ಇದುವರೆಗೂ ಬಿಡುಗಡೆ ಮಾಡಲಾಗಿದೆ

ಆ) ಕೋಲಾರ ತಾಲ್ಲೂಕಿಗೆ ನೀಡಿದ ಗುರಿಗೆ ಅನುಗುಣವಾಗಿ ರೂ 288 00 ಲಕ್ಷಗಳು ಬೇಕಾಗಿದ್ದು, ಅದರಲ್ಲಿ ರೂ 165 75 ಲಕ್ಷಗಳನ್ನು ಈಗಾಗಲೇ ಬಿಡುಗಡೆ ಮಾಡಿದ್ದು, ರೂ 122 25 ಲಕ್ಷಗಳನ್ನು ಬಿಡುಗಡೆ ಮಾಡಲು ಬಾಕಿ ಇರುತ್ತದೆ

ಚಿಂತಾಮಣಿ ತಾಲ್ಲೂಕಿಗೆ ನೀಡಿದ ಗುರಿಗೆ ಅನುಗುಣವಾಗಿ ರೂ 272 00 ಲಕ್ಷಗಳು ಬೇಕಾಗಿದ್ದು, ಅದರಲ್ಲಿ ರೂ 151 15 ಲಕ್ಷಗಳನ್ನು ಈಗಾಗಲೇ ಬಿಡುಗಡೆ ಮಾಡಿದ್ದು, ರೂ 120 85 ಲಕ್ಷಗಳನ್ನು ಬಿಡುಗಡೆ ಮಾಡಲು ಬಾಕಿ ಇರುತ್ತದೆ

ಇ) ಪ್ರಗತಿಯನ್ನು ಆಧರಿಸಿ ಗ್ರಾಮ ಪಂಚಾಯಿತಿಗಳಿಗೆ ನೇರವಾಗಿ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತದಿಂದ ಹಣ ಬಿಡುಗಡೆ ಮಾಡಲಾಗುತ್ತಿದೆ ಗ್ರಾಮ ಪಂಚಾಯಿತಿಗಳು ಮನೆಯ ಪ್ರಗತಿಯನ್ನು ಆಧರಿಸಿ 3 ಅಥವಾ 4 ಹಂತಗಳಲ್ಲಿ ಹಣವನ್ನು ಫಲಾನುಭವಿಗೆ ನೇರವಾಗಿ ಬಿಡುಗಡೆ ಮಾಡಲು ಕ್ರಮ ಕೈಕೊಳ್ಳಲಾಗುತ್ತಿದೆ

562 ಶ್ರೀ ಸುರೇಶ್ ಎಸ್ ಮಾರಿಹಾಳ್ (ಕಿತ್ತೂರು) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?